# ವಸುಧೇಂದ್ರ ಕಥೆಗಳು: ಸಾಮಾಜಿಕತೆ.

**ಡಾ. ದೊರೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕಡೂರು.

**Article Link: https://aksharasurya.com/2023/09/dr-doresha/**

## ABSTRACT:

ಈ ಶತಮಾನದಲ್ಲಿ ಸಾರಿಗೆ ಮತ್ತು ಸಂಪರ್ಕ ಸಾಧನಗಳು ಹೆಚ್ಚು ಅಭಿವೃದ್ಧಿ ಹೊಂದುತ್ತಿರುವುದನ್ನು ಕಾಣಬಹುದು. ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯಿಂದಾಗಿ ವಿಶ್ವವು ಒಂದು ಚಿಕ್ಕ ಗ್ರಾಮವಾಗಿ ಗೋಚರಿಸುತ್ತಿದೆ. ಆಧುನಿಕ ತಂತ್ರಜ್ಞಾನವನ್ನು ಬಳಸಿ ಅನೇಕ ಸಾರಿಗೆ ವ್ಯವಸ್ಥೆಗಳು ಲಭ್ಯವಿದ್ದು ಬಹುದೂರದಲ್ಲಿರುವವರನ್ನು ಕಡಿಮೆ ಅವಧಿಯಲ್ಲಿಯೇ ತಲುಪುವ ಮಟ್ಟಕ್ಕೆ ಮಾನವ ಮುಂದುವರೆದಿದ್ದಾನೆ. ಇಷ್ಟೇ ಅಲ್ಲದೇ ಸಂಪರ್ಕ ಕ್ಷೇತ್ರದಲ್ಲಿ ಬೃಹತ್ ಕ್ರಾಂತಿಯನ್ನು ಮಾಡಿದ್ದು ಬಾನುಲಿ, ದೂರದರ್ಶನ, ಇ–ಮೇಲ್, ಅಂತರ್‌ಜಾಲ, ಮೊಬೈಲ್ ಇತ್ಯಾದಿಗಳ ಮೂಲಕ ಬಹುದೂರದ ಪ್ರದೇಶಗಳಿಗೆ ಕಡಿಮೆ ಅವಧಿಯಲ್ಲಿಯೇ ತಲುಪುವ ಮಟ್ಟಕ್ಕೆ ಮಾನವ ಬೆಳೆದಿದ್ದಾನೆ. ಸಾಮಾಜಿಕ ಬದಲಾವಣೆ ಒಂದು ನಿರಂತರ ಪ್ರಕ್ರಿಯೆ, ಯಾವುದೇ ವ್ಯಕ್ತಿ ಅಥವಾ ಸಮಾಜವಾದರೂ ಸಹ ನಿರಂತರ ಬದಲಾವಣೆಯನ್ನು ಬಯಸುವುದು. ಬದಲಾವಣೆ ಇಲ್ಲದೆ ಹೋದಲ್ಲಿ ಜಡತ್ವ ಉಂಟಾಗಿ ಕ್ರಿಯೆಗಳು ಸರಾಗವಾಗಿ ನಡೆಯದೆ ಹೋಗಬಹುದು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಇದ್ದ ಬದಲಾವಣೆಯು ಹಿಂದಿನದಕ್ಕೆ ಹೋಲಿಸಿದಾಗ ಪ್ರಸ್ತುತದಲ್ಲಿ ಅಗಾಧವಾದ ವ್ಯತ್ಯಾಸಗಳನ್ನು ಕಾಣಬಹುದು. ಸಾಮಾಜಿಕ ಬದಲಾವಣೆಯು ತತ್‌ಕ್ಷಣದಲ್ಲಿ ಸಂಭವಿಸದು. ಅದು ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿರುತ್ತದೆ.

## KEYWORDS:

ಜಾಗತೀಕರಣ, ವಸಾಹತುಶಾಹಿ, ನಗರ, ಸಂಸ್ಕೃತಿ, ಗ್ರಾಮೀಣ, ರೈತ, ದುಡಿಮೆ, ಬದುಕು.

ವಸುಧೇಂದ್ರ ಅವರ ಕಥನಸಾಹಿತ್ಯ ಬಹುಮಟ್ಟಿಗೆ ಮಾನವೀಯತೆ, ಅವಮಾನ, ಕನ್ನಡಕಟ್ಟುವಿಕೆ ಮತ್ತು ಸಂಸ್ಕೃತಿಯ ಅರ್ಥ ಪರಂಪರೆಗಳನ್ನು ವ್ಯಾಖ್ಯಾನಿಸುತ್ತದೆ. ಈ ಆಶಯಗಳನ್ನು ಮೀರಿ ಬೆಳೆದಿರುವ ಇವರ ಕತೆ ಮತ್ತು ಕಾದಂಬರಿಗಳು ಇಂದಿನ ಜಾಗತೀಕರಣ, ವಾಣಿಜ್ಯೀಕರಣ ಮತ್ತು ಸ್ಥಳೀಯ ಸಂಸ್ಕೃತೀಕರಣದ ವಿವಿಧ ಮಗ್ಗುಲುಗಳನ್ನು ಪರಿಚಯಿಸುತ್ತವೆ. ವಸಾಹತುಶಾಹಿ ಸಂದರ್ಭ ದಾಟಿದ ಮೇಲೆ

ನವ ವಸಾಹತುಶಾಹಿಯ ಸವಾಲುಗಳನ್ನು ಗ್ಲೋಬಲ್ ಮತ್ತು ಲೋಕಲ್ ಸಮಸ್ಯೆಗಳ ಸಂಕೀರ್ಣ ಸ್ವರೂಪದಡಿಯಲ್ಲಿ ಚರ್ಚಿಸುವಂತೆ ಮಾಡುತ್ತವೆ. ಯಾವುದೇ ಆರ್ಥಿಕ ಅಭಿವೃದ್ಧಿಯು, ಸಂಸ್ಕೃತಿಯ ಅರ್ಥ ಪರಂಪರೆಗಳನ್ನು ಒಳಗೊಳ್ಳದಿದ್ದರೆ ಅದು ಹುಸಿ ನಾಗರಿಕತೆಯ ಬೆಳವಣಿಗೆಯಾಗುವ ಅಪಾಯವನ್ನು ಇವರ ಕಥನಗಳು ಎದುರಿಸಬಹುದಾದ ರೀತಿ ಕುತೂಹಲಕಾರಿಯಾದುದು. ಹಲವು ಪಂಥ, ವರ್ಗ, ಮಾದರಿಗಳ ಮೂಲಕ ನಿರಾಯಾಸವಾಗಿ ಹರಿದು ಬಂದ ಇವರ ಕಥನ ಕಲಾ ಕಿನಾರೆ ಮೈದುಂಬಿ ಭೋರ್ಗರೆಯುತ್ತಿದೆ.

ವಸುಧೇಂದ್ರರ ಕಥೆಗಳಲ್ಲಿ ವಾಸ್ತವ ಸಮಾಜಕ್ಕೆ 'ಹದಿಹರೆಯ' ಕಥೆಯ ಮೂಲಕ ಬದುಕಿನ ಬಗ್ಗೆ ಆಸೆ ಜೊತೆಗೆ ದುಡಿದು ತಿನ್ನುವ ವರ್ಗದ ಮೇಲಿನ ಹಿಡಿತಗಳು ಶುರುವಾಗಿದೆ. ಅಭಿ ಅಂತಿಮ ವರ್ಷದ ಇಂಜಿನಿಯರ್ ಓದುತ್ತಿದ್ದಾನೆ, ಆದರೆ ಹದಿಹರೆಯರ ಪ್ರೀತಿಗೆ ಬಲಿಯಾಗುತ್ತಾನೆ. ತಂದೆ ಶ್ರೀಧರ್‌ನ ಮೇಲಿನ ಜಗಳ ಜೊತೆಗೆ ಲೈಂಗಿಕ ಆಸಕ್ತಿಯು ಅಭಿಗೆ ಹೆಚ್ಚಾಗಿ ಉದ್ಯೋಗದ ಕಡೆ ಹೆಚ್ಚು ಗಮನ ಕೊಡಲಾಗುವುದಿಲ್ಲ. ಅಲ್ಲದೆ ಬದುಕಿನ ಜಂಜಾಟದಲ್ಲಿ ಮುಳುಗಿರುತ್ತಾನೆ. ನಗರ ಪ್ರದೇಶದ ಸಮಾಜದಲ್ಲಿ ಪ್ರೀತಿ–ಪ್ರೇಮಗಳ ಸಂಖ್ಯೆಯು ಹೆಚ್ಚಾಗುತ್ತಿವೆ. ಅಲ್ಲದೆ ಬಹಳಷ್ಟು ರೀತಿಯಲ್ಲಿ ಯುವಕರು ನಗರದ ಕಡೆಗೆ ಮನಸ್ಸು ಮತ್ತು ಗಮನ ಹರಿಸುತ್ತಿದ್ದಾರೆ. ಲೈಂಗಿಕ ಆಸಕ್ತಿಯಿಂದ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳು ಹೆಚ್ಚಾಗುತ್ತಿದೆ. ಅಭಿಯ ಮನಸ್ಸಲ್ಲಿ ಕಾಲ್‌ಸೆಂಟರ್ ಹುಡುಗಿಯ ನಂತರ, ತನ್ನ ಪ್ರೇಯಸಿಗೆ ಕರೆ ಮಾಡುತ್ತಾನೆ. ಇಬ್ಬರೂ ಪ್ರೀತಿಸುತ್ತಿರುತ್ತಾರೆ. ಅದು ತಾಯಿಗೂ ಗೊತ್ತಿತ್ತು. ಯುವಕರ ಮನಸ್ಸು ತಲ್ಲಣಗಳೂ ಬಹಳಷ್ಟು ರೀತಿಯಲ್ಲಿ ಸಮಾಜದ ಪಿಡುಗುಗಳಿಗೆ ಬಲಿಯಾಗುತ್ತಿದ್ದಾರೆ.

ಕ್ಷಮೆ ಎಂಬುದು ಮನುಷ್ಯ ಸಹಜ ಗುಣ. ಅದರಿಂದ ಆಗುವ ಭಾರಿ ಅನಾಹುತಗಳನ್ನು 'ಈ ಕ್ಷಮೆಯಿಲ್ಲದೂರಿನಲ್ಲಿ' ಕಥೆಯಲ್ಲಿ ಅಂತಹದೆ ಪ್ರಸಂಗ ಬರುತ್ತದೆ. ತಿಳಿದು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತಗಳು ಕ್ಷಮೆಯ ಮೂಲಕ ಬರುತ್ತದೆ. ರೇಖಾ ತನ್ನ ಮಗಳು ಈಜುಕೊಳದಲ್ಲಿ ಈಜಾಡುವುದನ್ನು ನೋಡಿ ಆಂಟಿಯ ತರಹ ಈಜು ಕಲಿಯಬೇಕು ಎಂದು ರಿಷಿಕಾಗೆ ಹೇಳುತ್ತಾಳೆ. ರಿಷಿಕಾ ಈಜುಕೊಳದಲ್ಲಿ ಮೂತ್ರ ವಿಸರ್ಜನೆ ಮಾಡಿದ್ದನ್ನು ತಿಳಿದು ಸುಜಾಳಿಗೆ ಅಸಹ್ಯವೆನಿಸುತ್ತದೆ. ಆದರೆ ಐದು ವರ್ಷದ ಮಕ್ಕಳಿಗೆ ಅದರ ಅರಿವೇ ಇರುವುದಿಲ್ಲ. ಸುಜಾಳು ಇ–ಮೇಲ್, ಮೂಲಕ ಇಡೀ ಅಪಾರ್ಟ್‌ಮೆಂಟ್‌ನ ಜನರಿಗೆ ತಿಳಿಸುತ್ತಾಳೆ. ಇದಕ್ಕೆ ಎಲ್ಲಾ–ರಿಂದಲೂ ವಿರೋಧ ವ್ಯಕ್ತವಾಗುತ್ತವೆ. ಆದರೆ ರೇಖಾ ಮಕ್ಕಳೇ ಇಲ್ಲದ ಸುಜಾ ಈ ರೀತಿಯ ತಪ್ಪು ಮಾಹಿತಿ ಕೊಟ್ಟು ಮಕ್ಕಳ ಮೇಲಿನ ಪ್ರೀತಿ ಇಲ್ಲದವಳು ಎಂದು

ದೂರುತ್ತಾಳೆ. ಆದರೆ ಸುಜಾಳು ಮಾತ್ರ ಗೌಪ್ಯವಾಗಿದ್ದ ವಿಚಾರವನ್ನು ರೇಖಾಳಿಗೆ ತಿಳಿಸುತ್ತಾಳೆ. ಮೊದಲ ಗಂಡನ ಹತ್ತಿರ ಇರದೇ ಎರಡನೇ ಮದುವೆಯಾಗಿದ್ದೇನೆ ಎಂದು ಹೇಳುತ್ತಾಳೆ. ರೇಖಾಗೆ ಕ್ಷಮೆ ಕೇಳಲು ಮುಂದಾಗುತ್ತಾಳೆ. ತಾನು ಮಾಡಿದ ತಪ್ಪುಗಳಿಗೆ ಕ್ಷಮೆ ಕೇಳುವ ಮನಸ್ಸು ಮತ್ತು ಕ್ಷಮಿಸುವ ಮನಸ್ಸು ಇರಬೇಕು. ಸುಜಾಳ ಗಂಡ ಅಪಘಾತದಲ್ಲಿ ಸತ್ತು ಹೋಗುತ್ತಾನೆ. ಆಗ ಸುಜಾಳಿಗೆ ವಿಷಯ ತಿಳಿದು ಅಪಘಾತವಾದ ಸ್ಥಳಕ್ಕೆ ಬರುತ್ತಾಳೆ. ರೇಖಾಳಿಗೆ ಕ್ಷಮೆ ಕೇಳಿದಾಗ ಆಕೆ ಕ್ಷಮಿಸುತ್ತಾಳೆ. ಇಲ್ಲವೇ ಎಂಬ ಆತಂಕ ಜೊತೆಗೆ ಕ್ಷಮೆ ಎಂಬುದು ಎಲ್ಲಾದಕ್ಕೂ ಅನ್ವಯಿಸುತ್ತದೆ. ಕ್ಷಮಿಸುವ ಗುಣ ಹೊಂದಿದ್ದರೆ ಎಲ್ಲದಕ್ಕೂ ಕ್ಷಮೆಯೇ ಮೊದಲು ಬರುತ್ತಿತ್ತು. ಕ್ಷಮೆಯಿಲ್ಲದೂರಿನಲ್ಲಿ ಕಥೆಯು ವಿನೋದಿಂದಲೇ ಪ್ರಾರಂಭವಾಗಿ ವಿನೋದದಿಂದಲೇ ಮುಕ್ತಾಯ ಆಗುತ್ತದೆ.

ಕೆಂಪುಗಿಣಿ ಕಥೆಯಲ್ಲಿ ಆಧುನಿಕ ಅರ್ಥವ್ಯವಸ್ಥೆ ಅದರೊಳಗಿನ ದುರಾಸೆ ಇವೆಲ್ಲಾ ಹೇಗೆ ಒಂದು ಹಳ್ಳಿಯ ಹಣೆಬರಹವನ್ನೇ ಬದಲಾಯಿಸಿಬಿಡುವ ಚಿತ್ರಣ ಈ ಕಥೆಯಲ್ಲಿದೆ. ಹಳ್ಳಿಯ ಸಾಂಪ್ರದಾಯಿಕ ಸಮಾಜದಲ್ಲಿರುವ ಮುಗ್ಧ ಬಾಲಕನೊಬ್ಬ ಕಾಣುವ ಬಾಲ್ಯದ ನೆನಪುಗಳು ಸಮಾಜದಲ್ಲಿ ಇರುವ ವಾಸ್ತವ ಸ್ಥಿತಿಯನ್ನು ತೋರಿಸುತ್ತದೆ. ಪುಟ್ಟ ಬಾಲ್ಯದಲ್ಲಿ ಆ ಹಳ್ಳಿಯ ಪರಿಸರ ಜೊತೆಗೆ ಹೊಲ, ಮನೆ, ಮರ, ಗಿಡ, ಬೆಟ್ಟಗುಡ್ಡ ಮತ್ತು ವಾತಾವರಣದಿಂದಾಗಿ ಅಲ್ಲಿಯ ಪ್ರಕೃತಿ ಸೌಂದರ್ಯವೇ ಈಗ ಮರೆಯಾಗುತ್ತಿದೆ. ಬೆಳೆದು ದೊಡ್ಡವನಾದ ಮೇಲೆ ದೊಡ್ಡ ಕೆಲಸದಲ್ಲಿ ಇದ್ದರೂ ಆ ಬದುಕು ಚಿತ್ರಣ ಇಲ್ಲಿ ಬದಲಾಗಿದೆ. ಈರಪ್ಪ ಹೇಳಿದ ಕಥೆಗಳು ನೆನಪಿಗೆ ಬರುತ್ತದೆ. ಸಮಾಜದಲ್ಲಿ ಸ್ಥಿತಿಗತಿಗಳು ಬದಲಾದಂತೆ ಮನುಷ್ಯನ ಆಸೆ ಆಕಾಂಕ್ಷೆಗಳು ಹೆಚ್ಚಾಗುತ್ತದೆ. ಗಣಿಗಾರಿಕೆಯ ಮೂಲಕ ದೇಶದ ಸಂಪತ್ತನ್ನು ಬರಿದು ಮಾಡಲು ಮುಂದಾಗುತ್ತಾರೆ. ಕೆಂಪುಗಿಣಿ ಹಾವಿನಂತೆ ಏಳು–ಎಡೆಯ ಬಿಟ್ಟು ಸಂಪತ್ತನ್ನ ರಾಶಿರಾಶಿಗಳು ಆದರೆ ಎಡೆಯ ಮೇಲೆ ಕುಳಿತಿರುವ ಕುಮಾರಸ್ವಾಮಿ ನಿರುದ್ಯೋಗಿಯಾಗಿ ಈ ಯಂತ್ರದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಹಾವಿನಂತೆ ಇರುವ ಯಂತ್ರವನ್ನು ಓಡಿಸುತ್ತಿರುತ್ತಾನೆ. ಬಾಲ್ಯದಲ್ಲಿ ಹೇಳಿದ ಕಥೆಯು ಇಡೀ ವಾಸ್ತವ ಸಮಾಜ ಕಥೆಯು ಒಂದು ರೀತಿಯಲ್ಲಿ ಹಣದ ಆಸೆ, ಐಷಾರಾಮಿ ಬದುಕು, ಬಡತನ ಎಂಬುದು ರೈತರನ್ನು ಬಲಿಪಶುಗಳಾಗಿ ಮಾಡಿಕೊಂಡಿದ್ದಾರೆ. ಇಡೀ ವಾತಾವರಣವೇ ಧೂಳುಗಳಿಂದ ತುಂಬಿ ತುಳುಕುತ್ತಿತ್ತು.

ರೈತರ ಜಮೀನುಗಳಿಗೆ ಚಿನ್ನದ ಬೆಲೆ ಬಂದಿತು. ಮೈನ್ಸ್‌ಗಳ ರಪ್ತುಗಳು ಹೆಚ್ಚಾಗುತ್ತಿದೆ. ರೈತರು ಊರು ಬಿಟ್ಟು ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ರೈತರ ಮೇಲಿನ ದೌರ್ಜನ್ಯ, ಬಡತನ, ಹಸಿವು, ಇವುಗಳು

ಸಮಾಜದಲ್ಲಿ ಬಹಳಷ್ಟು ರೀತಿಯಲ್ಲಿ ಬರಗಾಲ ಬಂದು ಬೇಳೆಕಾಳುಗಳು ಸಿಗದೆ ಆರ್ಥಿಕವಾಗಿ ದೇಶದ ಪ್ರಗತಿಯು ಕುಂಟಿತಗೊಳ್ಳುತ್ತಿದೆ. ರೈತರ ಜಮೀನುಗಳು ಮಾಯವಾಗಿ ಕೈಗಾರಿಕೆಗಳು, ಮನೆಗಳು ನಿರ್ಮಾಣ ಆಗುತ್ತಿದೆ. ಇದರಿಂದ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿದೆ. ರೈತರು ಸಾಲ ಮಾಡಿ ಜಮೀನುಗಳಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಅದರಿಂದ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ಕಂಗಾಲಾಗಿ ಜಮೀನುಗಳನ್ನು ಮಾರುತ್ತಾರೆ. ಅಲ್ಲದೆ ವಲಸೆ ಪ್ರಮಾಣ ಹೆಚ್ಚಾಗುತ್ತಿದೆ.

ಸಮಾಜದಲ್ಲಿ ಮೌಢ್ಯ ಸಂಪ್ರದಾಯಗಳು ಇಂದು ಮಾಯವಾಗುತ್ತಿದೆ. ಜೊತೆಗೆ ಸಂಪ್ರದಾಯಗಳನ್ನು ಮೀರಿ ಬದುಕುವ ಜೀವನವನ್ನು ಕಟ್ಟಿಕೊಳ್ಳಲು ಮುಂದಾಗುತ್ತಾರೆ. ಮೂಢನಂಬಿಕೆಗಳನ್ನು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿಯೂ ಸಹ ಕಡಿಮೆಯಾಗುತ್ತಿದೆ. ಜಾಗತೀಕರಣದ ಪರಿಣಾಮವಾಗಿ ಜನರ ಜೀವನ ಮಟ್ಟವು ಬದಲಾಗುತ್ತಿದೆ. ನಗರ ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿನ ಸ್ಥಿತಿಗತಿಗಳಿಗೆ ಮಾರುಹೋಗುತ್ತಾರೆ. ಅಲ್ಲದೆ ನಗರ ಸೌಂದರ್ಯಕ್ಕೆ ಆಕರ್ಷಣೆ ಹೆಚ್ಚಾಗುತ್ತಿವೆ. ನಾಗರೀಕತೆಯು ಬಹಳಷ್ಟು ಬದಲಾಗಿದೆ ಜನರ ಆಸೆಗೆ ಪ್ರಕೃತಿಯ ಸಂಪತ್ತೆಲ್ಲವು ಬಲಿಪಶುವಾಗುತ್ತಿದೆ. ಅದರಿಂದ ಆಗುವ ಅನಾಹುತಗಳಿಗೆ ಯಾರು ಹೊಣೆ?–ಎಂಬ ಪ್ರಶ್ನೆ ಸಾಮಾನ್ಯವಾಗಿ ಪರಿಸರ ಪ್ರೇಮಿಗಳಲ್ಲಿ ಕಾಡುತ್ತದೆ. ನಗರ ಪ್ರದೇಶಗಳು ಹೆಚ್ಚಿನ ಪ್ಲಾಸ್ಟಿಕ್ ಬಳಕೆಯಿಂದ ಬಹುಬೇಗ ಮಾಲಿನ್ಯವಾಗುತ್ತಿವೆ. ಎಲ್ಲಿ ನೋಡಿದರು ಅಲ್ಲಿ ಕಸದ ರಾಶಿಗಳು ಬಿದ್ದಿರುತ್ತಿದೆ. ಅದರಿಂದ ಜನಗಳಿಗೆ ಹೆಚ್ಚಿನ ತೊಂದರೆಗಳು ಆಗಿದ್ದು ಅಮಾಯಕರು ಬಲಿಯಾಗುತ್ತಿದ್ದಾರೆ.

ಪ್ರಕೃತಿ ಸಂಪತ್ತು ಬರಿದಾಗುತ್ತಿದೆ. ಎಲ್ಲಿ ನೋಡಿದರೂ ಗಣಿಗಾರಿಕೆ, ರಸ್ತೆ, ಮನೆ, ಕಾರ್ಖಾನೆಗಳು ಕಾಣಸಿಗುತ್ತವೆ. ಪರಿಸರದಲ್ಲಿ ಮರ ಗಿಡಗಳನ್ನು ಕಡಿದು ಅದರಿಂದ ತನ್ನ ಅನುಕೂಲತೆಗೆ ಬಳಸಿಕೊಳ್ಳುತ್ತಿದ್ದಾರೆ. ‘ಕಾಡು ಬೆಳೆಸಿ, ನಾಡು ಉಳಿಸಿ’ ಎಂಬ ಮಾತು ಮರೆಯಾಗಿ ಪರಿಸರದಲ್ಲಿನ ಸಂಪತ್ತಿನಿಂದ ಹಣ ಸಂಪಾದನೆ ಮುಖ್ಯ ಗುರಿಯಾಗುತ್ತಿದೆ. ಇದರಿಂದ ಮಳೆಯ ಪ್ರಮಾಣ ಕಡಿಮೆಯಾಗಿ ರೈತರು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ನದಿ, ಸರೋವರ ಎಲ್ಲಾವು ತ್ಯಾಜ್ಯ ವಸ್ತುಗಳಿಂದ ತುಂಬಿ ತುಳುಕುತ್ತಿದೆ. ಹಾಗು ಮಾಲಿನ್ಯವಾಗಿ ನೀರು ಕಲುಷಿತಗೊಂಡು ಹಲವಾರು ಪ್ರಾಣಿ ಪಕ್ಷಿಗಳು ಸಾಯುವ ದುಸ್ಥಿತಿಗೆ ಬಂದಿದೆ. ಪ್ಲಾಸ್ಟಿಕ್ ನಿಷೇಧ ಮಾಡಿ ತ್ಯಾಜ್ಯ ವಸ್ತುಗಳನ್ನು ಶುದ್ಧೀಕರಣ ಮಾಡಿ ಕಸಕಡ್ಡಿಗಳಿಂದ ತಯಾರಿಸಿದ ಗೊಬ್ಬರದ ಮೂಲಕ ಬಳಸಬಹುದು. ಎರೆಹುಳಗಳು ಗೊಬ್ಬರಗಳನ್ನು ಬಳಸುವುದ–ರಿಂದ ಇಳುವರಿಯು ಹೆಚ್ಚಾಗುತ್ತದೆ. ಅಲ್ಲದೇ ಯಾವುದೇ ರೀತಿಯ ರೋಗಗಳು

ಬರುವುದಿಲ್ಲ.

ರಾಸಾಯನಿಕ ಗೊಬ್ಬರಗಳನ್ನು ಬಳಸಿ ವಿಷಪೂರಿತ ಔಷಧಿಗಳ ಬಳಕೆಯಿಂದ ಪರಿಸರಕ್ಕೆ ಬಹಳಷ್ಟು ರೀತಿಯಲ್ಲಿ ಹಾನಿಯುಂಟಾಗುತ್ತದೆ. ಕ್ರಿಮಿಕೀಟಗಳು ಸಾಯುತ್ತವೆ. ಗಿಡಗಳಿಗೆ ರೋಗಗಳು ಹೆಚ್ಚಾಗುತ್ತದೆ. ಜೊತೆಗೆ ಪರಿಸರ ಹಾಳಾಗುತ್ತದೆ. ವಿಷಪೂರಿತ ಆಹಾರ ಪದಾರ್ಥಗಳನ್ನು ಬೆಳೆದು ಅದರಿಂದ ಜನರಿಗೆ ಕಾಯಿಲೆ ಹೆಚ್ಚಾಗುತ್ತಿದೆ. ಮೂಢನಂಬಿಕೆಗೆ ಬಲಿಯಾಗುವ ಮತ್ತು ಸ್ತ್ರೀಯರ ಮೇಲಿನ ಶೋಷಣೆಗಳ ಬಗ್ಗೆ, 'ಸುಳ್ಳು ನಮ್ಮಲಿಲ್ಲವಯ್ಯ, ಸುಳ್ಳೇ ನಮ್ಮ ದೇವರು' ಕಥೆಯಲ್ಲಿ ಮಾಧವರಾಯ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ವ್ಯಕ್ತಿ ಮದುವೆಯಾಗಿ ಬಂದ ಹೆಂಡತಿ ರಿಂದಾಳು ಹೊಸತರಲ್ಲಿ ಚೆನ್ನಾಗಿದ್ದಳು. ಆಕೆಯ ಮೇಲೆ ದೆವ್ವ ಬಂದಿದೆ ಎಂದು ಸಮಾಜದಲ್ಲಿನ ಮೌಢ್ಯ ಸಂಪ್ರದಾಯದಿಂದ ಆಕೆಯು ನೋವನ್ನು ಅನುಭವಿಸುತ್ತಾಳೆ. ಮಾಧವರಾಯ ಹಿಂದಿನ ಜನ್ಮದಲ್ಲಿ ಮಾಡಿದ ಮೋಸ, ಸ್ತ್ರೀಯರ ಮೇಲಿನ ವ್ಯಾಮೋಹ ಹೆಚ್ಚಾಗಿತ್ತು. ತುಳಸಿಯ ಮೇಲೆ ಕಾಮದ ಆಸೆ ಇತ್ತು. ಆಕೆಯನ್ನು ಪಡೆಯಲು ಮುಂದಾದನು. ಆದರೆ ಅದರಿಂದ ಆಕೆಯ ಇಡೀ ಸಂಸಾರವೇ ನಾಶವಾಯಿತು. ಊರು ಬಿಟ್ಟು ವಲಸೆ ಹೋಗುತ್ತಾರೆ. ಅಲ್ಲಿ ನೋವಿನಲ್ಲಿ ಅನ್ನ, ನೀರು ಸಿಗದೆ ಹೀನಾಯವಾಗಿ ಮರಣ ಹೊಂದುತ್ತಾರೆ. ಅದೇ ಮಾಧವರಾಯ ಮುಂದಿನ ಜನ್ಮದಲ್ಲಿ ಅದೇ ಹುಡುಗಿಯನ್ನು ಮದುವೆಯಾಗುತ್ತಾನೆ. ದೆವ್ವದ ಮುಂದೆ ಸಾಮಾನ್ಯ ಮನುಷ್ಯನ ಶಕ್ತಿ ಕಡಿಮೆ. ದೆವ್ವಗಳು ರಿಂದಾಳ ಮೇಲೆ ಆಗಾಗ ಬಂದು ಬಹಳ ರೀತಿಯ ಕಷ್ಟಗಳನ್ನು ಕೊಡುತ್ತಿದ್ದವು. ಅವುಗಳಿಗೆ ಬಯಸಿದ ಊಟ, ಉಪಚಾರಗಳನ್ನು ಮಾಡುತ್ತಿದ್ದರು. ಅವುಗಳು ತೃಪ್ತಿಯಾಗುತ್ತಿರಲಿಲ್ಲ.

ದೆವ್ವಗಳು ಆ ಊರಿನ ಜನರಿಗೆ ಬಹಳ ರೀತಿಯಲ್ಲ ಹತ್ತಿರವಾಗುತ್ತಿದ್ದವು. ಜನರೂ ಕೂಡಾ ಅವುಗಳ ಜೊತೆಗೆ ಹೊಂದಿಕೊಂಡು ಬಾಳಲು ಹಾಗೂ ಜೀವನ ಸಾಗಿಸುತ್ತಿದ್ದರು. ಮೂಢನಂಬಿಕೆಯಿಂದಾಗಿ ದೆವ್ವಗಳು ನಮಗೆ ನೋವು ಕಷ್ಟಗಳನ್ನು ಕೊಡುವುದಿಲ್ಲ. ಅವು ಜನರೊಂದಿಗೆ ಬೆರತು ಬಿಡುತ್ತವೆ ಎಂಬುದು ತಿಳಿಯುತ್ತದೆ. 'ಮಾಧವರಾಯ ಸತ್ತ ನಂತರ ಇನ್ನೂ ನಾವು ಇಲ್ಲಿ ಇರೋಹಂಗಿಲ್ಲ ನಮ್ಮನ್ನು ನೋಡಿಕೊಳ್ಳುತ್ತಿದ್ದ ಮಹಾನುಭಾವನೆ ಇಲ್ಲದ ಮೇಲೆ ನಾವ್ಯಾಕೆ ಇಲ್ಲಿಗೆ ಬರಣ ಇನ್ನು ಮುಂದೆ ನಿಮಗೆ ಕಷ್ಟ ಬೇಕಾದಷ್ಟಿದೆ' ಎಂದು ಹೊರಟು ಹೋಗಿಬಿಟ್ಟವು. ಊರು ಬಿಟ್ಟು ಮುಂದೆ ಎಂದಿಗೂ ನಿಮಗೆ ಕಷ್ಟ ಕೊಡುವುದಿಲ್ಲವೆಂದು ಮನೆ ಬಿಟ್ಟು ಹೋದವು. ಆ ದೆವ್ವಗಳು ಜನರಿಗೆ ಹತ್ತಿರವಾಗಿ ಜನ ಅವುಗಳನ್ನು ಕಳೆದುಕೊಳ್ಳುವಾಗ ಅವರಿಗೆ ನೋವುಂಟಾಯಿತು. ಸ್ತ್ರೀಯರ ಮೇಲಿನ ಶೋಷಣೆಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಶಿಕ್ಷಣ ಪಡೆದ ಪದ್ಮಾವತಿ ತನ್ನ ಗುಣಮಟ್ಟದ ಶಿಕ್ಷಣ ಇಲ್ಲದೆ,

ಇಡೀ ಊರಿನವರೊಂದಿಗೆ ಪೆದ್ದಿಯ ರೂಪವಾಗಿ ಪರಿಣಮಿಸಿದಳು. ಆಕೆಯು ನಿಷ್ಠೆಯಿಂದ ಕೆಲಸ ಮಾಡಿದರೂ ಸಹ ಕೆಲವು ತಪ್ಪುಗಳಿಂದಾಗಿ ಆಕೆ ಪೆದ್ದಿಯಂತೆ ಕಂಡು ಬರುತ್ತಾಳೆ. ಗುಣಮಟ್ಟದ ಶಿಕ್ಷಣದಿಂದ ವಂಚಿತರಾದ ಸಮಾಜದಿಂದ ಬಹಳಷ್ಟು ರೀತಿಯಲ್ಲಿ ತೊಂದರೆಗಳು ಉಂಟಾಗುತ್ತಿದೆ. ಪದ್ಮಾವತಿಗೆ ನೋವು ಹತಾಶೆಗಳು ಆದವು. ಆಕೆಗೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಅವಮಾನವಾದರು ಆಕೆ ಧೃತಿಗೆಡಲಿಲ್ಲ. ಕಲಿಯುವ ಮನಸ್ಸಿದ್ದಾಗ ತಮ್ಮ ತಪ್ಪು ನಿರ್ಧಾರದಿಂದ ಜೀವನವನ್ನು ಯಾಕೆ ಹಾಳುಮಾಡಿಕೊಳ್ಳಬೇಕು, ನಿಂತು ಸಮಸ್ಯೆಯನ್ನು ಎದುರಿಸಿ ಸಾಧಿಸಬೇಕು ಎಂದು ಛಲದಿಂದ ಬದುಕುವ ನಿರ್ಧಾರ ಕೈಗೊಂಡಳು.

'ಮಂಗಳಾರತಿ ಗೋಪಣ್ಣ' ಕಥೆಯ ಮೂಲಕ ವಾಸ್ತವ ಸಮಾಜದಲ್ಲಿ ಹೊಸ ಹೊಸ ರೀತಿಯ ತಂತ್ರಜ್ಞಾನವನ್ನು ಬಳಸಿಕೊಂಡು ಯಂತ್ರೋಪಕರಣಗಳನ್ನು ಬಳಸಲು ಮುಂದಾಗುತ್ತಾನೆ. ಗೋಪಣ್ಣ ತನಗರಿವಿಲ್ಲದೆ ಮಾಡಿದ ಎಡವಟ್ಟಿನಿಂದಾಗಿ ಸ್ಕೂಟರ್ ಪಂಚರ್ ಹಾಕಿ ಕಳುಹಿಸುತ್ತಾನೆ. ಆದರೆ ಆ ಸ್ಕೂಟರಿನ ಚಕ್ರವೇ ಕಳಚಿ ಬೀಳುತ್ತದೆ. ಗೋಪಣ್ಣ ರಾಯರ ಪ್ರೀತಿಯ ಭಕ್ತ. ಅಲ್ಲದೆ ಈತನ ಮಠದ ಉದ್ಧಾರಕ್ಕಾಗಿ ಅಣ್ಣನ ಮಗ ಸೀನ ನೀಡಿದ ಚೆಕ್‌ನಿಂದಾಗಿ ಬಂದ ಹಣದಿಂದ ಇಡೀ ಊರಿಗೆ ಊಟ ಜೊತೆಗೆ ಹೋಮ, ಹವನಗಳನ್ನು ಮಾಡಿಸಬೇಕೆಂಬ ಆಸೆ ಆದರೆ ಅರ್ಚಕ ಇದಕ್ಕೆ ಒಪ್ಪುವುದಿಲ್ಲ. ರಾಯರ ಮಠದ ಆರಾಧನೆಯ ಕಾಲದಲ್ಲಿ ಮಳೆ ಬಂದು ಊಟಕ್ಕೆ ಕುಳಿತವರು ಎದ್ದು ಬಿಡುತ್ತಾರೆ. ಹೀಗಾಗಿ ಮಂಟಪ ಕಟ್ಟಲು ಹಣವನ್ನು ಬಳಸಬೇಕು ಎಂಬುದು ಅರ್ಚಕರ ಅಭಿಪ್ರಾಯವಾಗಿತ್ತು.

ಗೋಪಣ್ಣ ಅದಕ್ಕೆ ಮಾತ್ರ ಒಪ್ಪುವುದಿಲ್ಲ. ಮಳೆಕಾಲದಲ್ಲಿ ರಾಯರ ಮಠದಲ್ಲಿ ಊಟವನ್ನು ಮಾಡುವಾಗ ಜನರು ಅರ್ಧದಲ್ಲಿಯೇ ಎಂದಾಗ ಗೋಪಣ್ಣ ಮಂಗಳಾರತಿ ಎತ್ತಿದಾಗ ಮಳೆ ಕಡಿಮೆ ಆಯಿತು ಅಂದಿನಿಂದ ಗೋಪಣ್ಣ 'ಮಂಗಳಾರತಿ ಗೋಪಣ್ಣ' ಎಂದು ಕರೆಯಲ್ಪಟ್ಟನು. ಆದರೆ ಇವನ ಮನಸ್ಸಿನಲ್ಲಿ ಬದಲಾವಣೆ, ಮಳೆ ಬರಲಿ ಎಂದು ಪ್ರಾರ್ಥನೆ ಮಾಡುತ್ತಿದ್ದ, ಆಗ ಮಳೆ ಬರುವಾಗ, ಮಂಗಳಾರತಿ ಮಾಡಿದಾಗ ಮಳೆ ನಿಂತಿತು. ಹೀಗೆ ಸಂಪ್ರದಾಯ ಕೆಲವು ಈಗಲು ನೆಡೆಯುತ್ತಿದೆ. ಮೂಢನಂಬಿಕೆ ಜೀವಂತವಾಗಿದೆ. ಅದರ ಜೊತೆಗೆ ಜನರ ಸಂಪ್ರದಾಯ ದೇಶ ವಿದೇಶಗಳಲ್ಲಿ ಹೆಸರುವಾಸಿಯಾಗುತ್ತಿದೆ. ಸಮಾಜ ನಿಂತ ನೀರಲ್ಲ, ಇದು ಸದಾ ಕ್ರಿಯಾಶೀಲವಾದದ್ದು. ಬದಲಾವಣೆಯು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ, ಇದು ಕುಟುಂಬದಿಂದ ಹಿಡಿದು ವಿಶ್ವ ಮಟ್ಟದವರೆಗೂ ಏಕರೂಪವೂ ಸಾರ್ವತ್ರಿಕವು ಆಗಿರುತ್ತದೆ. ಸಾಮಾಜಿಕ ಸ್ಥಿತಿಗತಿಗಳು ಭೌತಿ–ಕವಾಗಿ ಮತ್ತು ಸಾಂಸ್ಕೃತಿಕ ಹಿನ್ನಲೆಯಲ್ಲಿ ಸಂಭವಿಸುವುದು.ಮಾನವನ ವರ್ತನೆಯ

ಮೇಲೆ ಅಗಾಧವಾದ ಪ್ರಭಾವ ಬೀರುವವು. ಮಾನವನ ಬೇಕು ಬೇಡಗಳು ಇಷ್ಟ ಅನಿಷ್ಟಗಳನ್ನು ಅವಲಂಬಿಸಿದೆ. ಸೂರ್ಯ ಚಂದ್ರರು ಹೇಗೆ ಜಗತ್ತಿಗೆ ನಿರಂತರವಾಗಿ ಬೆಳಕನ್ನು ನೀಡುತ್ತಿದ್ದಾರೆಯೋ ಹಾಗೆಯೇ ಸಮಾಜವೂ ಸಹ ನಿರಂತರ ಬದಲಾವಣೆ ಹೊಂದುತ್ತಿರುತ್ತದೆ. ದೇಶದಿಂದ ವಿದೇಶ ಸಂಸ್ಕೃತಿಗಳು ಭಿನ್ನವಾಗಿರುತ್ತದೆ. ಜೊತೆಗೆ ಆಚಾರ ವಿಚಾರಗಳು ಸಂಪ್ರದಾಯಗಳು ಬದಲಾಗಿವೆ.

ಜನಸಂಖ್ಯೆಯ ಗಾತ್ರ ಒಂದು ದೇಶದ ಮೇಲೆ ಆರ್ಥಿಕ ಅಭಿವೃದ್ಧಿಯ ಮತ್ತು ಅವನತಿಯ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಜನಸಂಖ್ಯೆ ಹೆಚ್ಚಾದಂತೆ ಆಹಾರ, ವಸತಿ, ನಿರುದ್ಯೋಗ, ಬಡತನ, ಅನಾರೋಗ್ಯ, ಪರಿಸರ ಮಾಲಿನ್ಯ, ಅಂ–ಧಶ್ರದ್ಧೆ, ಅನಕ್ಷರತೆ ಮುಂತಾದ ಸಮಸ್ಯೆಗಳು ಹೆಚ್ಚುತ್ತಿವೆ. ಈ ತಲೆಮಾರಿನ ನಡುವಣ ಸಂಸ್ಕೃತಿ, ಸಂಪ್ರದಾಯ, ಆಚಾರ–ವಿಚಾರ, ರೂಢಿ, ನಂಬಿಕೆ, ಮನೋಭಾವ, ಆಸಕ್ತಿ ಇತ್ಯಾದಿಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಹೊಸ ತಲೆಮಾರಿನವರು ಇವುಗಳಿಗೆ ಅಧಿಕ ಒತ್ತು ನೀಡದೆ, ಆಧುನಿಕ ಜೀವನ ಶೈಲಿಗೆ ಒಗ್ಗಿರುವುದರಿಂದ ಸಮಾಜದಲ್ಲಿ ಬದಲಾವಣೆ ಕಾಣಬಹುದು. ತಂತ್ರಜ್ಞಾನ ಹೆಚ್ಚಾದಂತೆ ಯಂತ್ರಗಳ ಬಳಕೆಯಲ್ಲಿ ಗಣನೀಯವಾಗಿ ಹೆಚ್ಚಳ ಕಂಡು ಬಹಳಷ್ಟು ರೀತಿಯಲ್ಲಿ ಪರಿಸರ ಮಾಲಿನ್ಯವೂ ಕೂಡಾ ಹೆಚ್ಚಾಗುತ್ತಿದೆ. ಕೆಂಪುಗಿಣಿ ಕೆಂಧೂಳಿಯ ಕಥೆಯಲ್ಲಿ ಗಣಿಗಾರಿಕೆಯಿಂದ ಆಗುವ ಅನಾಹುತಗಳನ್ನು ಕಾಣಬಹುದು. ನಿಸರ್ಗದತ್ತವಾಗಿರುವ ಸಂಪತ್ತಿನ ಮೇಲೆ ಆಸೆಯಿಂದ ಇಡೀ ಬಯಲು ಸೀಮೆಯು ಬರಿದಾಗುತ್ತಿದೆ. ಅಲ್ಲದೆ ಧೂಳು, ಗಾಳಿ, ಶಬ್ಧಗಳು ಹೆಚ್ಚಾಗುತ್ತಿದೆ. ಇದರಿಂದ ಅನಾರೋಗಗಳು ಹೆಚ್ಚಾಗುತ್ತಿವೆ. ಪ್ರಾಣಿ, ಪಕ್ಷಿ, ಮನುಷ್ಯನ ಮೇಲೆ ಕಲುಷಿತ ವಾತಾವರಣದಿಂದಾಗಿ ಸಾಯುವ ಸ್ಥಿತಿಗೆ ಬಂದಿದ್ದಾನೆ. ಎಲ್ಲಿ ನೋಡಿದರಲ್ಲಿ ಲಾರಿಗಳು, ಜೆ.ಸಿ.ಬಿ.ಗಳು ಓಡಾಡುತ್ತಿವೆ. ಶಬ್ಧಮಾಲಿನ್ಯದಿಂದಾಗಿ ಸಾರಿಗೆ ಸಂಪರ್ಕವು ಹೆಚ್ಚಾಗುತ್ತಿವೆ. ಎಲ್ಲಿ ನೋಡಿದರು ಅಲ್ಲಿ ವಾಹನಗಳು ಅವುಗಳ ಶಬ್ಧ, ಹೊಗೆಯಿಂದ ಬಹಳಷ್ಟು ರೀತಿಯಲ್ಲಿ ತೊಂದರೆಗಳು ಆಗುತ್ತಿವೆ. ವಾಹನಗಳ ಸಂಖ್ಯೆ ಕಡಿಮೆಯಾದರೆ ಮನುಷ್ಯನ ಚಲನೆಯು ಕಡಿಮೆಯಾಗುತ್ತದೆ. ಹಳೆಯ ಯಂತ್ರಗಳ ಬಳಕೆಯನ್ನು ನಿಲ್ಲಿಸಬೇಕು ಜೊತೆಗೆ ಗಣಿಗಾರಿಕೆಯಿಂದ ಆಗುವ ಪರಿಸರ ತೊಂದರೆಗಳಿಂದಾಗಿ ಜನರು ತಮ್ಮ ಜಮೀನುಗಳನ್ನು ಕಳೆದುಕೊಂಡರು.

ನಗರ ಪ್ರದೇಶಗಳಿಗೆ ವಲಸೆ ಬಂದ ಜನರ ಸ್ಥಿತಿ ಸಮಾಜದ ಅತ್ಯಂತ ಚಿಕ್ಕ ಘಟಕವಾದ ಕುಟುಂಬದ ಮೇಲೆ ತಂತ್ರಜ್ಞಾನದ ಪ್ರಭಾವ ಅಧಿಕವಾಗಿದೆ. ಇಂದು ಅವಿಭಕ್ತ ಕುಟುಂಬಗಳು ಮಾಯವಾಗಿ ವಿಭಕ್ತ ಕುಟುಂಬಗಳು ಅಧಿಕವಾಗಿವೆ. ಗಂಡ, ಹೆಂಡತಿ, ಮಕ್ಕಳಿಗೆ ಮಾತ್ರ ಒಂದು ಕುಟುಂಬ ಸೀಮಿತವಾಗಿದೆ. ಪ್ರಾಚೀನ ಕಾಲಕ್ಕೆ ಹೋಲಿಸಿದ್ದಾರೆ. ಇಂದು ಸ್ತ್ರೀಯರ ಸ್ಥಾನಮಾನಗಳು ಉತ್ಕೃಷ್ಟವಾದ ಮಟ್ಟದಲ್ಲಿದೆ.

'ತೊಟ್ಟಿಲನ್ನು ತೂಗೊ ಕೈ ಜಗತ್ತನ್ನೇ ತೂಗಿತು' ಎಂಬ ನಾಣ್ನುಡಿಯಂತೆ ಮಹಿಳೆ ಇಂದು ಪುರುಷನಂತೆಯೇ ಎಲ್ಲಾ ಕ್ಷೇತ್ರಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಾಳೆ. ಹಾಗೆಯೇ ಇಂದು ವಿವಾಹಗಳು ಗುರುಹಿರಿಯರ ಆಶಯದಂತೆ ನಡೆಯದೆ ಪ್ರೀತಿ ಪ್ರೇಮಗಳ ಹೆಸರಿನಲ್ಲಿ ನಡೆಯುತ್ತಿವೆ. ಆಸ್ತಿಯ ಹಕ್ಕನ್ನು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿ ನೀಡುವುದರಿಂದ ಅಣ್ಣ ತಂಗಿಯರು ಹಾಗೂ ಅಕ್ಕ ತಮ್ಮಂದಿರಲ್ಲಿ ಒಳ ಜಗಳಗಳಿಗೆ ದಾರಿ ಮಾಡಿಕೊಟ್ಟು ಸಂಬಂಧಗಳನ್ನು ಕಡಿದು ಹಾಕುವ ಮಟ್ಟಕ್ಕೆ ಹೋಗಿವೆ. ಮಾನವೀಯ ಸಂಬಂಧಗಳು ಇರಬೇಕಾದ ಜಾಗದಲ್ಲಿ ಹಣ, ಆಸ್ತಿ, ಅಂತಸ್ತುಗಳು ತಮ್ಮ ಜಾಗವನ್ನು ಆಕ್ರಮಿಸಿಕೊಂಡಿವೆ.

'ಎರಡು ರೂಪಾಯಿ' ಕಥೆಯಲ್ಲಿ ಕಾಶವ್ವ ಪಾತ್ರವು ಒಂದು ರೀತಿಯ ಬದುಕಿನ ಜಂಜಾಟದಲ್ಲಿ ಸಮಸ್ಯೆ ಮೋಸ ಮಾಡಿದ ಅನುಮಾನ ಕಾಣುತ್ತಿದೆ. ಹಣದ ಆಸೆ ಇಲ್ಲದೆ ಇರುವ ಜನರು ಬೇರೆ. ನಿಷ್ಠೆಯಿಂದ ದುಡಿದು ಬದುಕುವ ಜನ ಎಲ್ಲಾ ರೀತಿಯಲ್ಲು ನ್ಯಾಯ ಸಮ್ಮತವಾಗಿ ದುಡಿಯುತ್ತಾರೆ. ಹಮಾಲಿ ಶ್ರೀರಾಮಾಂಜನೇಯ ಪಾತ್ರ ಒಂದು ರೀತಿಯಲ್ಲಿ ಕಂಡು ಬರುತ್ತದೆ. ಹಮಾಲಿಯರು ಸಹ ಆ ಕಾಶವ್ವ ಸಹಾಯ ಮಾಡಿದ. ಶ್ರೀರಾಮಾಂಜನೇಯ ನೆನಪು ಸದಾ ಕಾಡುತ್ತದೆ. ತಾನು ಮಾಡಿದ ಮೋಸ ಅವಳಿಗೆ ತಿಳಿಯುತ್ತದೆ. ಎರಡು ರೂಪಾಯಿ ಜೀವನದಲ್ಲಿ ಎಷ್ಟು ಮುಖ್ಯವಾಗಿರುತ್ತದೆ ಎಂಬುದು ತಿಳಿಯುತ್ತದೆ. ಆಕೆ ರೈಲಿನಲ್ಲಿ ಪ್ರಯಾಣಕ್ಕೆ ಹೋಗಲು ಊರಿನ ಜನರ ಬಳಿ ಆತನಿಗೆ ಹಣವನ್ನು ಹಿಂತಿರುಗಿಸಬೇಕು ಎಂದು ಬಹಳಷ್ಟು ಕಷ್ಟ ಪಡುತ್ತಾಳೆ. ಆದರೆ ಅದು ಸಾಧ್ಯವಾಗುವುದಿಲ್ಲ. ಹಣ ಮನುಷ್ಯನ ಆಸೆಗೆ ಮಿತಿ ಇಲ್ಲ. ರೈಲಿನಲ್ಲಿ ಪ್ರಯಾಣಿಸುವ ಅವನ ಮಗ ಹುಡುಕಿ ಆತನಿಗೆ ಹಣ ಹಿಂದಿರುಗಿಸುತ್ತಾಳೆ. ಸಮಾಜದಲ್ಲಿ ಇಂತಹ ಘಟನೆ ಮರುಕಳಿಸಬಹುದು ಎಂಬ ಭಯ.

ಕಾರ್ಪೊರೇಟ್ ಜಗತ್ತಿನ ಮೊದಲ ಆಧ್ಯತೆ ಹಣ ಮತ್ತು ಯಶಸ್ಸು ಇದ್ದರೆ ಎಲ್ಲವು ತಮ್ಮ ಬಳಿ ಬರುತ್ತದೆ ಎಂಬುದು ತಿಳಿಯದೆ ಎಷ್ಟು ಕಲ್ಪನೆ ಅದರಿಂದಾಗುವ ಅನಾಹುತಗಳಿಗೆ ಯಾರು ಇಲ್ಲಿ ಜವಾಬ್ದಾರರಲ್ಲ. ಸಾಮಾಜಿಕ ಸ್ಥಿತಿಗಳು, ಕಂಪ್ಯೂಟ–ರ್ ಯಂತ್ರಗಳು, ವಿಜ್ಞಾನ, ತಂತ್ರಜ್ಞಾನ ಇವುಗಳ ಮೇಲೆ ಈ ಜಾಗತೀಕರಣ ನಿಂತುಕೊಂಡಿದೆ. ಇದು ಮುಂದೆ ಯಾವ ಸ್ಥಿತಿಗೆ ಜಗತ್ತು ಬರುತ್ತಿದೆ.ಅದರಿಂದ ದುಷ್ಪರಿಣಾಮಗಳನ್ನು ಬಿಂಬಿಸಲು ಸಾಧ್ಯವಿಲ್ಲ. ದೇಶ ವಿದೇಶಗಳಲ್ಲಿ ವೈಮನಸ್ಸುಗಳು ಉಂಟಾಗಿ ಹಲವಾರು ಯುದ್ಧವಾಗಿ ಇಡೀ ವಿಶ್ವವೇ ಅಲ್ಲೋಲ ಕಲ್ಲೋಲವಾಗಿ ಜನ ಸಾಯುವ ಸ್ಥಿತಿಗೆ ಬಂದಿದೆ.ಯುದ್ಧಗಳಿಂದ ಅನಾಹುತಗಳು ಬಹಳಷ್ಟು ರೀತಿಯ ಭೀಕರ ವಾತಾವರಣವನ್ನು ಕಾಣಬಹುದು. ಉನ್ನತ ಮಟ್ಟದಲ್ಲಿನ ಶಿಕ್ಷಣ ಪಡೆದು

ಹೊಸ ಹೊಸ ಕೋರ್ಸ್‌ಗಳೂ ಬಂದು ಅದರಿಂದ ಗೊಂದಲಗಳು ಆಗುತ್ತಿವೆ. ನಿರುದ್ಯೋಗ ಸಮಸ್ಯೆ ಉಂಟಾಗುತ್ತಿದೆ. ತಂತ್ರಜ್ಞಾನ ಹೊಸ ಹೊಸ ಪ್ರಾಜೆಕ್ಟ್‌ಗಳು ಜನರ ಚಿಂತೆಗೀಡು ಮಾಡುತ್ತಿವೆ. ಜನರು ಈ ಪ್ರಭಾವದಿಂದಾಗಿ ಯಂತ್ರದಂತೆ ವರ್ತಿಸಲು ಮುಂದಾಗುತ್ತಿದ್ದಾರೆ. ರೋಬೋಟ್ ತಂತ್ರಜ್ಞಾನದಿಂದ ಹಲವಾರು ದುಡಿಯುವ ವರ್ಗದವರ ಮೇಲೆ ಪರಿಣಾಮ ಬೀರುತ್ತಿದೆ.

ಪ್ರಾಣಿಗಳಿಗೆ ಇರಬೇಕಾದ ಬುದ್ಧಿ, ಮನುಷ್ಯನಿಗೆ ಇಲ್ಲದ ಪರಿಸ್ಥಿತಿ. 'ವಿಕಾಸವಾದ' ಕಥೆಯಲ್ಲಿ ವ್ಯಕ್ತವಾಗಿದೆ.ವಾಸ್ತವ ಸಮಾಜಕ್ಕೆ ಬದಲಾಗುತ್ತಿರುವ ನಾವುಗಳು ಮಂಗನಿಂದ ಮಾನವರಾಗಿ ಬದಲಾಗಿ ಶತ ಶತಮಾನಗಳೇ ಕಳೆದರು ಕ್ರೂರ ವ್ಯವಸ್ಥೆಯ ಯಾವ ರೀತಿ ಇಲ್ಲಿ ಪ್ರಾಣಿಗಳು ಮನುಷ್ಯರ ಬಗೆಗಿನ ಚಿಂತೆ ಮತ್ತು ಅವನನ್ನು ಕಾಪಾಡುವ ರೀತಿಗಳನ್ನು ಕಾಣಬಹುದು. ಈ ಕಥೆಯು ಮಂಗಣ್ಣ ಮರದ ಮೇಲೆ ಕುಳಿತಿರುತ್ತದೆ. ಮಾನವ ಅದನ್ನು ಮಾತಾನಾಡಿಸಲು 'ಹಲೋ ಬ್ರದರ್ ಮಂಗಣ್ಣ' ಎಂದು ಹೇಳುತ್ತಾನೆ. ಪುರಾತನ ವರ್ಷಗಳ ಹಿಂದೆ ನಿನ್ನ ಸಹಚರರು ಮಾನವರಾಗಿರುವ ಕಂಕಣ ತೊಟ್ಟು ಪರಿಶ್ರಮಿಸುತಿದ್ದಾರೆ. 'ನೀನು ಇನ್ನೂ ಮೈಗಳ್ಳತನ ಮಾಡಿದೀಯ' ಎಂದು ಹೇಳುತ್ತಾನೆ. ವಾಸ್ತವ ಪ್ರಪಂಚದಲ್ಲಿ ಇರುವ ರೀತಿ ಪೋನ್, ಡಿ.ವಿ.ಡಿ. ಹಾಕಿ ಸಿನಿಮಾ ನೋಡಬಹುದು. ಬೇಜಾರು ಮಾಡ್ಕೋಬ್ಯಾಡ ಮಂಗಣ್ಣ ಕಾಲ ಮಿಂಚಲಿ ಇವತ್ತೆ ಮಾನವರಾಗಲು ಮನಸ್ಸು ಮಾಡು ಎಂದು ಹೇಳುತ್ತಾನೆ. ಈ ವಾಸ್ತವ ಸಮಾಜಕ್ಕೆ ಅಸೂಯೆ, ಅನ್ಯಾಯ, ಆಕ್ರಮಣಗಳು ಹಣದ ಮೇಲೆ ನಿಂತಿದೆ ಎಂದು ಹೇಳುತ್ತದೆ. ಮಂಗಣ್ಣ ಮರದ ಮೇಲೆ ಕುಳಿತು 'ಅಯ್ಯೋ ಪಾಪ ನಾನು ಅಷ್ಟೋಂದು ಕಿರುಚಿದರು ಆತನಿಗೆ ಗೊತ್ತಾಗಲೇ ಇಲ್ಲ' ಎಂದು ಕೊಂಡಿತು. ಆದರೆ ಆತ ಹಿಂದೆ ತಿರುಗಿ ನೋಡಿದ ಮೇಲೆ ನನ್ನನ್ನು ಮಾತನಾಡಿಸುತ್ತಿದ್ದ ಹುಲಿ ಬಂದದ್ದು ಗೊತ್ತಾಗಲೇ ಇಲ್ಲ ಭಯಗೊಂಡು ಓಡಿಹೋದನು ವಾಸ್ತವ ಸಮಾಜದ ಭಯ ಭಕ್ತಿಗೆ ಹೆಚ್ಚು ಬೆಲೆ. ದೇವರ ಬಗೆಗಿನ ಭಕ್ತಿ ಹೆಚ್ಚಾಗಿದೆ. ಅಂದರೆ ಕೆಲವು ಮಂದಿಗೆ ಹಣ, ಆಸ್ತಿ, ಜನರ ಆಸೆ ಆಕಾಂಕ್ಷೆಗಳು ಬದಲಾದಂತೆ ಜೀವನದ ರೀತಿ ನೀತಿಗಳು ಸಹ ಬದಲಾಗುತ್ತಿದೆ. ಕಥೆಗಳ ಮೂಲಕ ವಾಸ್ತವ ಜಗತ್ತಿನ ಇಂಗ್ಲೀಷ್ ಶಿಕ್ಷಣದ ವ್ಯಾಮೋಹದಿಂದಾಗಿ ನಾವು ಒಂದು ಕಡೆ ನಿಲ್ಲದೆ ಎಲ್ಲಾ ಕಡೆ ಅಲೆಯುವಂತೆ ಆಗಿದೆ. ಇಂಗ್ಲೀಷ್ ಶಿಕ್ಷಣ ಕಲಿತರೆ ದೇಶ ವಿದೇಶಗಳ ಕಡೆ ಅಲೆದಾಡುತ್ತೇವೆ. ಹಣ, ಆಸ್ತಿಗಳು ಸಂಪಾದನೆಯು ಹೆಚ್ಚಾಗುತ್ತಿದೆ. ಎಂದು ಒಂದು ಕಡೆ ಆಸೆ ಐಷಾರಾಮಿ ಜೀವನ ನಡೆಸಬಹುದು ಎಂಬ ನಂಬಿಕೆ.

ಹೊಸ ತಲೆಮಾರಿನ ಬರಹಗಾರರು ಮುಸ್ಲೀಂ, ಹಿಂದು ಧರ್ಮಗಳಲ್ಲಿ ಹಲವಾರು ರೀತಿಯ ವಿಚಾರಗಳನ್ನು ತಿಳಿಸಿದ್ದಾರೆ. ಸ್ತ್ರೀಯರು ಸಹ ತಾವು

ಅನುಭವಿಸಿದ ಕಷ್ಟಗಳನ್ನು ಕುರಿತು ಬರೆದಿದ್ದಾರೆ. ತ್ರಿವೇಣಿ, ಚಂಪ, ನಾಗವೇಣಿ, ಸರಸ್ವತಿ, ಸುನಂದ ಇವರು ಸ್ತ್ರೀವಾದಿ ಚಿಂತನೆಳನ್ನು ಇಟ್ಟುಕೊಂಡು ಬರೆದಿದ್ದಾರೆ. ಆಧುನಿಕರಣ, ಜಾಗತೀಕರಣ, ನಗರೀಕರಣ ಬೆಳೆದಂತೆ ಮನುಷ್ಯನ ಭಾವನೆಗಳು ಆಸೆ ಆಕಾಂಕ್ಷೆಗಳು ಬದಲಾಗುತ್ತಾ ಹೋಗುತ್ತಿದೆ. ಆಹಾರ ಪದ್ಧತಿಗಳು ಇದ್ದು ಬೇರೆ ರೀತಿಯಲ್ಲಿ ಇದೆ. ಮೋಜು ಮಸ್ತಿಯ ಆಹಾರ ಪದಾರ್ಥಗಳು ಬಂದಿದೆ. ಪಾಸ್ಟ್‌ಪುಡ್‌ಗಳು ಬಂದಿದೆ.ಗ್ರಾಮೀಣ ಸೊಬಗಿನ ಅಡುಗೆಗಳು ಅವನತಿಯತ್ತ ಸಾಗುತ್ತಿದೆ. ಹೊರಗಿನ ಸೌಂದರ್ಯಕ್ಕೆ ಜನರು ಮಾರು ಹೋಗಿದ್ದಾರೆ. ಒಳಗಿರುವ ಕಲ್ಮಶ ಅಂಶಗಳು ಹಾಗೆಯೇ ಇದೆ. ಸೌಂದರ್ಯ ಆರಾಧನೆ ಹೆಚ್ಚಾಗುತ್ತಿದೆ. ಬಣ್ಣ ಬಣ್ಣದ ಲೋಕ ಈಗ ಸೃಷ್ಠಿಯಾಗಿದೆ. ವಿದ್ಯುತ್‌ಗಳು, ರಸ್ತೆಗಳು, ಉಡುಗೆ ತೊಡುಗೆಗಳು, ಆಹಾರ ಪದಾರ್ಥಗಳು ಐಟೆಕ್ ಮಾದರಿಯಲ್ಲಿ ಕಟ್ಟಿರುವ ಮನೆಗಳು, ಯಂತ್ರಗಳು ವಾಹನಗಳ ಬಳಕೆ ಹೆಚ್ಚಾಗುತ್ತಿದೆ.

ಹೊಸ ತಲೆಮಾರಿನ ಜಾಗತೀಕರಣ ಬಂದಾಗಿನಿಂದ ಕವಿಗಳಲ್ಲಿ ಹೊಸ ರೀತಿಯ ಆಲೋಚನೆಗಳನ್ನು ಇಟ್ಟುಕೊಂಡು ಬರೆಯಲು ಮುಂದಾಗುತ್ತಿದ್ದಾರೆ. ಅದರಿಂದ ದೇಶದ ಪ್ರಗತಿಯು ಜೊತೆಗೆ ಅವನತಿಯು ಕಂಡುಬರುತ್ತದೆ. ಕಾರಣ ಮಾನವ ಅತಿಯಾದ ಆಸೆಗಳಿಂದಾಗಿ ಹಣ ಸಂಪಾದನೆಯು ಮುಖ್ಯ ಗು–ರಿಯಾಗಿಟ್ಟುಕೊಂಡು ಬದುಕುತ್ತಿದ್ದಾರೆ. ಕೆಳವರ್ಗದವರ ಮೇಲೆ ಆಗುವ ಅನ್ಯಾಯ, ಅನುಮಾನಗಳು ಹೆಚ್ಚಾಗುತ್ತಿದೆ. ಜೊತೆಗೆ ಬೆಂಬಿಡದೇ ಕಾಡುವ ಸಮಸ್ಯೆಗಳು ಬಂದಲ್ಲಿ ಒಂದು ರೀತಿಯ ಅವನತಿಗೆ ಕಾರಣವಾಗುತ್ತಾರೆ. ಆಧುನಿಕತೆಯ ಮೂಲಕ ಯಾಂತ್ರಿಕ ಬದುಕಿಗೆ ಮಾರು ಹೋಗಿ ಹಳ್ಳಿಯ ವಾತಾವರಣವೇ ಬದಲಾಗಿದೆ. ಆದರೆ ವಾಸ್ತವದಲ್ಲಿ ಕೆಲವರು ಹಳ್ಳಿಗಳ ಮುಖ ಮಾಡಿ ಸರ್ಕಾರದ ಉಚಿತ ಅಕ್ಕಿ, ಬೇಳೆಗಳು ಬಂದು ಅದರಿಂದ ದುಡಿಯುವ ವರ್ಗ ಕಡಿಮೆಯಾಗುತ್ತಿದೆ. ಸೋಮಾರಿತನ ಜಾಸ್ತಿಯಾಗುತ್ತಿದೆ. ತುತ್ತು ಅನ್ನಕ್ಕಾಗಿ ಕಷ್ಟ ಪಡುತ್ತಿರುವ ರೈತರು ಮಳೆ ಬೆಳೆ ಇಲ್ಲದೇ ಕಂಗಾಲಾಗಿದ್ದಾರೆ. ಸಮಾಜದಲ್ಲಿ ಯಾವುದೇ ಚಿಂತೆ ಮಾಡದೇ ನೆಮ್ಮದಿಯಿಂದ ಜೀವನ ಸಾಗಿಸಲು ಮುಂದಾಗಿದ್ದಾರೆ.

ಮೋಜು ಮಸ್ತಿಗಳು ಪಾರ್ಟಿಗಳು ಹೆಚ್ಚಾಗುತ್ತದೆ. ಜಾನಪದ ಕಲೆಗಳು ಮರೆತು ಹೋಗಿ ಈಗ ಪ್ಲಾಸ್ಟಿಕ್ ಮಯವಾಗಿ ಕೊಳಕು ಸಮಾಜ ಸೃಷ್ಠಿಯಾಗುತ್ತಿದೆ. ಭ್ರಷ್ಟ ಸಮಾಜವನ್ನು ಸೃಷ್ಟಿಮಾಡುತ್ತಿರುವುದು ಬೇರೆ ಯಾರು ಅಲ್ಲ ನಾವೆ. ಯಂತ್ರಗಳ ಬಳಕೆಯಿಂದ ಬೇಸಾಯವು ಕಡಿಮೆಯಾಗುತ್ತಿದೆ. ಹೈನುಗಾರಿಕೆ ಕಡಿಮೆಯಾಗುವುದಕ್ಕೆ ಮಳೆಯ ಕೊರತೆಯೇ ಪ್ರಮುಖ ಕಾರಣವಾಗಿದೆ. ನಗರ ಪ್ರದೇಶದಲ್ಲಿ ಸಿಗುವ ಸೌಲಭ್ಯಗಳು ಗ್ರಾಮೀಣ ಪ್ರದೇಶದಲ್ಲಿ ಸಿಗುವಂತೆ ಆಗಿದೆ. ಶಾಲೆಗಳು, ಆಸ್ಪತ್ರೆ, ಪಶು

ಆಸ್ಪತ್ರೆ, ಅಂಗಡಿಗಳು, ಮಾರುಕಟ್ಟೆಗಳು ದಿನನಿತ್ಯದ ಸಾಮಾನುಗಳು, ಸಾರಿಗೆ ವ್ಯವಸ್ಥೆ ಪ್ರತಿ ಹಳ್ಳಿಗಳಲ್ಲಿ ಇದೆ. ಉನ್ನತ ಶಿಕ್ಷಣದ ಆಸೆಯಿಂದ ನಗರ ಪ್ರದೇಶಗಳಿಗೆ ಬಂದು ಯುವ ಸಮುದಾಯ ಮೋಜು ಮಸ್ತಿಗಳು ಜೊತೆಗೆ ಪೋನ್, ಕಂಪ್ಯೂಟರ್, ಆಕರ್ಷಣೆಗೆ ಒಳಗಾಗಿದ್ದಾರೆ. 24 ಗಂಟೆಯು ಮಾತಾಡುವುದು ತಂತ್ರಜ್ಞಾನದ ಪ್ರಗತಿಯ ಜೊತೆಗೆ ಅವನತಿಯ ದಾರಿಯನ್ನು ಹಿಡಿಯುತ್ತಿದೆ. ದುಡಿದು ತಿನ್ನುವ ವರ್ಗ ಕಡಿಮೆಯಾಗುತ್ತಿದೆ. ಮೋಸ, ವಂಚನೆ, ಅನ್ಯಾಯ ಅಕ್ರಮಗಳಿಂದ ಹಣಗಳಿಸಿ ಶ್ರೀಮಂತರಾಗುತ್ತಿದ್ದಾರೆ. ವಾಹನಗಳು ಹೆಚ್ಚಿದಂತೆ ಗಾಳಿಯು ಕಲುಷಿತಗೊಳ್ಳುತ್ತಿದೆ. ನದಿ ಸರೋವರಗಳಲ್ಲಿ ತ್ಯಾಜ್ಯ ವಸ್ತು ಹಾಕಿ ಜಲಮಾಲಿನ್ಯವಾಗುತ್ತಿದೆ. ಎಲ್ಲಿ ನೋಡಿದರೂ ಕಾರ್ಖಾನೆಗಳು ಜೊತೆಗೆ ಮನೆಗಳು ರಸ್ತೆಗಳು ಕಾಣುತ್ತಿದೆ. ಮರಗಿಡಗಳ ಸಂಖ್ಯೆಯು ಕಡಿಮೆಯಾಗುತ್ತಿದೆ.

ದೇಶ ತಂತ್ರಜ್ಞಾನದಿಂದ ಪ್ರಗತಿಯನ್ನು ಕಾಣುತ್ತೇವೆ. ಆದರೆ ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ. ಸಂಪ್ರದಾಯ, ಮೂಢನಂಬಿಕೆಗಳು ಕಡಿಮೆಯಾಗುತ್ತಿದೆ. ದೇವರ ಮೇಲಿನ ಭಕ್ತಿಯಿಂದ ಅಪಾರವಾದ ಸಂಪತ್ತು ಖಜಾನೆಗಳು ತಲುಪುತ್ತಿವೆ. ಅದರಿಂದ ಕೆಲವು ಮಠ, ದೇವಾಸ್ಥಾನಗಳು ಭಕ್ತರಿಂದ ತುಂಬಿ ತುಳುಕುತ್ತಿದೆ. ಅವರಿಗೆ ಸೌಲಭ್ಯಗಳು ಶಿಕ್ಷಣ, ಊಟ, ವಸತಿ ವ್ಯವಸ್ಥೆಯನ್ನು ಮಾಡುತ್ತಿದೆ. ದೇವರ ಯಾಕೆ ಬೇಕು? ಎಂಬ ಪ್ರಶ್ನೆ ಮೂಡುತ್ತದೆ. ಹಣಗಳಿಸಲು ಬಹಳಷ್ಟು ರೀತಿಯಲ್ಲಿ ಸತ್ಯವನ್ನು ಸುಳ್ಳು ಮಾಡುತ್ತಾರೆ. ದಿನ ನಿತ್ಯದ ಹಲವಾರು ರೀತಿಯ ಸುದ್ಧಿ ಮಾಧ್ಯಮಗಳು, ಪತ್ರಿಕೆಗಳು ಬರುತ್ತಿದೆ. ಸತ್ಯದ ಹಾದಿಯಲ್ಲಿ ಬದುಕುತ್ತಿರುವ ಎಲ್ಲಾ ಕಡೆ ಮೋಸ, ವಂಚನೆ ಹೆಚ್ಚುತ್ತಿದೆ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬ ಪ್ರಶ್ನೆ ಮೂಡುತ್ತದೆ. ಇನ್ನೇನು ಎಲ್ಲೆಲ್ಲೂ ಬೆಳಕೇ ಬೆಳಕು ಎಂಬ ಭಾವನೆ ಮೂಡಿಸಿ ವಾಹನಗಳು ಮುಂದೆ ಹೋಗಿಬಿಡುತ್ತಿದ್ದವು. ಬೆಳಕು ಕಣ್ಮರೆಯಾದ ತಕ್ಷಣ ಮೂಡಿದ ಕತ್ತಲೆ ಮೊದಲಿದ್ದ ಕತ್ತಲೆಗಿಂತ ಹೆಚ್ಚು ಭೀಕರವೆನಿಸುತ್ತದೆ. ಮಂಜಿ ಮತ್ತು ತಾಯಿ ಕೃಷ್ಣವೇಣಮ್ಮ ಇಬ್ಬರು 'ಮಾನಸ ಸರೋವರ' ಸಿನಿಮಾ ನೋಡುತ್ತಿದ್ದಾಗ ಬೆಳಗಾಗಿದ್ದು ಗೊತ್ತಾಗಲಿಲ್ಲ. ಆ ಬೆಳಕು ಕತ್ತಲೆಗಿಂತಲು ಭೀಕರವಾಗಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ದೈನಂದಿನ ಜೀವನದಲ್ಲಿ ಬಳಕೆ ಮಾಡಲು ನೆರವಾಗುವುದು. ವಾಸ್ತವ ಸಮಾಜದಲ್ಲಿ ವರ್ತಮಾನದ ತಲ್ಲಣಗಳು ಹೊಸ ರೀತಿಯ ಕಲ್ಪನೆಗಳಿಗೆ ದಾರಿ ಮಾಡಿಕೊಡುತ್ತದೆ. **'ಕೋಳಿ'** ಎಂಬ ಕಥೆಯು ಮಾಂಸಾಹಾರ ಮತ್ತು ಸಸ್ಯಾಹಾರ ಇವೆರಡರ ನಡುವೆ ಇರುವ ವೈಮನಸ್ಸುಗಳನ್ನು ತೆರೆದಿಡುತ್ತದೆ. ಈ ದೇಶದಲ್ಲಿ ಪ್ರಿಯವಾದ ವಸ್ತು ಕೋಳಿ ಮಾಂಸ ಮಾರಾಟ ಸಹ. ಪ್ರಾಣಿ ಹಿಂಸೆ ಹೆಚ್ಚಾಗುತ್ತಿದೆ. ಕುರಿ, ಕೋಳಿ,

ದನ, ಹಂದಿಗಳ ಮಾಂಸಗಳು ಬಂದಿವೆ. ಜನ ಬಲಿಕೊಡುವ ಸಂಪ್ರದಾಯಗಳು ಹೆಚ್ಚಾಗುತ್ತಿದೆ.

ವಾಸ್ತವ ಸಮಾಜದಲ್ಲಿ ದೇವರ ಭಕ್ತಿಯು ಹೆಚ್ಚಾಗುತ್ತಿದೆ. ಪಾರ್ಟಿಗಳು ಹೆಚ್ಚಾಗುತ್ತಿದೆ. ಮೂಢನಂಬಿಕೆಗಳ ಹೆಸರಿನಲ್ಲಿ ಪ್ರಾಣಿಗಳ ಮಾರಣಹೋಮ ನಡೆಯುತ್ತಿದೆ. ಅದರಿಂದ ಪಾರ್ಟಿ ಮೋಜಿನಲ್ಲಿ ಜನರು ತೇಲಾಡುತ್ತಿದ್ದಾರೆ. ಜೊತೆಗೆ ಮಧ್ಯಪಾನ ಮತ್ತು ಧೂಮಪಾನಗಳ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಉದ್ಯೋಗ ಸಿಕ್ಕ ತಕ್ಷಣ ಪಾರ್ಟಿ ಜೊತೆಗೆ ಸಂಪ್ರದಾಯಗಳನ್ನು ಮೀರಿ ಎಲ್ಲಾ ವರ್ಗಗಳ ಹಿಂಸೆಗಳು ಇದೆ. ಆದರೆ ಇದನ್ನು ವಿರೋಧಿಸಲು ಜಾತಿಗಳು ಇವೆ. ಒಂದು ರೀತಿಯಲ್ಲಿ ಹಿಂಸೆಯ ಮೂಲಕ ಕ್ರೂರ ವ್ಯವಸ್ಥೆಯಿಂದ ಮನುಷ್ಯನ ಆಸೆ ಆಕಾಂಕ್ಷೆಗಳಿಗಾಗಿ ಮೂಡನಂಬಿಕೆ ಹೆಸರಿನಲ್ಲಿ ಆರ್ಥಿಕವಾಗಿ ಹಿಂದುಳಿಯುತ್ತದೆ. ಜನ ಮಾತ್ರ ಮಾಂಸಾಹಾರ ಸೇವನೆಯಿಂದ ಹಲವಾರು ರೀತಿಯಲ್ಲಿ ವಿವಿಧ ಕಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ. ದೇವರು ಹೆಸರಿನಲ್ಲಿ ಭಕ್ತಿಯನ್ನು ತೋರಿಸಲು ಪಾರ್ಟಿ ಮಾಡುವುದು, ಮಧ್ಯಪಾನ, ಧೂಮಪಾನದಂತಹ ಸೇವನೆಯಿಂದಾಗಿ ಕ್ಯಾನ್ಸರ್ ಎಂಬ ಕಾಯಿಲೆ ಬರುತ್ತಿದೆ. ಅಲ್ಲದೆ ಆರ್ಥಿಕವಾಗಿ ಲಾಭವು ಹೆಚ್ಚುತ್ತದೆ. ಅಂದರೆ ಭಕ್ತಿಯ ಹೆಸರಿನಲ್ಲಿ ಮಾಡುವ ಮೋಸದಿಂದಾಗಿ ಭಕ್ತಿಯು ಕಡಿಮೆಯಾಗುತ್ತಿದೆ. ಈ ಜಗತ್ತಿನಲ್ಲಿ ಹಲವಾರು ರೀತಿಯ ತೊಂದರೆಗಳಿಂದ ಜನರು ಸಮಸ್ಯೆಗಳಿಗೆ ದಾ–ರಿಯಾಗಿದೆ.

ಸಮಾಜದಲ್ಲಿ ದುಡಿದು ತಿಂದು ಬದುಕುವ ವ್ಯವಸ್ಥೆ ಇಂದು ಮಾಯವಾಗಿ ಮೋಜು ಮಸ್ತಿಗಳಿಗಾಗಿ ಹಣ ಸಂಪಾದನೆ ಮಾಡುವ ರೀತಿಗಳು ಕ್ರೂರ ವ್ಯವಸ್ಥೆಯನ್ನು ಸೃಷ್ಟಿ ಮಾಡುತ್ತಿದೆ. ಬಡತನ ಹೆಚ್ಚಾಗಿ ಕಂಡು ಬರುತಿದೆ. ಆಳುವ ವರ್ಗವು ಮಾಡುವ ಶೋಷಣೆಗಳು ಎಲ್ಲಾ ವರ್ಗಗಳಲ್ಲಿ ಕಾಣಬಹುದಾಗಿದೆ. ಹಣದಿಂದಲೇ ಸಮಾಜ ನಿಂತಿದೆ ಎಂದು ತೋರಿಸಿಕೊಟ್ಟಿದೆ. ಜಾಗತೀಕರಣ ಪ್ರಭಾವದಿಂದಾಗಿ ನಗರಗಳ ಎದುರು ಗ್ರಾಮಗಳು ತಳ ಸಮುದಾಯಗಳು ಹಿಂದೆಗಿಂತಲು ವಿಚಿತ್ರ ತವಕ ತಲ್ಲಣಗಳನ್ನು ಎದುರಿಸುತ್ತದೆ. ಹೈದರಾಬಾದ್ ಕರ್ನಾಟಕದ ಹಳ್ಳಿಗಳ ಸ್ಥಿತಿಗಳಂತು ಹೃದಯವಿದ್ರಾವಕ. ಇನ್ನೊಂದೆಡೆ ನೈಸರ್ಗಿಕ ಸಂಪತ್ತಿನ ಲೂಟಿ, ಒಡೆದು ಗಣಿರೂಪದಲ್ಲಿ ಅವರ ಹಣಗಳಿಸಿ ಶ್ರೀಮಂತರಾಗುವ ವರ್ಗವೊಂದು ಸೃಷ್ಟಿಯಾಗಿದೆ. ಅವರು ಹೆಲಿಕಾಪ್ಟರ್‌ಗಳಲ್ಲಿ ತಿರುಗಾಡುವಂತ ಐಷಾರಾಮಿ ಬದುಕನ್ನು ನಡೆಸುತ್ತಿದ್ದಾರೆ. ಮೇಲಿನ ಅಧಿಕಾರಿಗಳಿಂದಲು ಕಿರುಕುಳಗಳು ಹೆಚ್ಚಾಗಿ ಬಹಳಷ್ಟು ರೀತಿಯ ಆತ್ಮಹತ್ಯೆಗಳು ದಾರಿ ಮಾಡಿಕೊಡುತ್ತಿದೆ. ಇದಕ್ಕೆ ಯಾರು ಹೊಣೆ? ಎಂಬ ಪ್ರಶ್ನೆ ಮೂಡುತ್ತದೆ. ಭ್ರಷ್ಟಾಚಾರ ಎಂಬುದು ಎಲ್ಲಾ ಕ್ಷೇತ್ರಗಳಲ್ಲೂ

ಮೈಗೂಡಿಸಿಕೊಂಡಿದ್ದು ಶೋಷಣೆಗಳು ಹೆಚ್ಚಾಗಿ ಜನರಿಗೆ ಆರ್ಥಿಕವಾಗಿ ದುಡಿದ ಹಣವು ಅವರ ಪಾಲಾಗುತ್ತಿದೆ. 20 ರ ದಶಕದಲ್ಲೂ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸಲು ಕವಿಗಳು ತಮ್ಮ ಬರಹಗಳ ಮೂಲಕ ಪ್ರೇರೇಪಿಸುತ್ತಿದ್ದರು. ಆದರೆ ಈಗ ನಿಂತ ನೀರಂತೆ ಜಡತ್ವ ಸ್ಥಿತಿಯಲ್ಲಿ ಚಳುವಳಿಗಳ ಯಾರ ಪರವಾಗಿ ನಿಲ್ಲುತ್ತಿಲ್ಲ. ನಮ್ಮ ನಮ್ಮೊಳಗಿನ ವೈಮನಸ್ಸಗಳಿಂದಾಗಿ ಜಗಳಗಳು, ಗಲಾಟೆಗಳು ಆಗುತ್ತಿವೆ. ಜನಪದ ನಿಲುವುಗಳು ಎಲ್ಲಿಯು ಕಾಣಬಹುದು.

ಜನರಿಂದಲೇ ರಚಿತವಾದ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದು ಹಣ ಶ್ರೀಮಂತರ ಪಾಲಾಗುತ್ತಿದೆ. ರಾಜಕೀಯ ಹೆಚ್ಚಾಗಿ ಎಲ್ಲಾಕಡೆ ಬರುತ್ತಿದೆ. ಸಮಾಜ ಒಂದು ರೀತಿಯಲ್ಲಿ ಇಂದು ಹಳ್ಳಿಯ ಸೌಂದರ್ಯ, ವಾತಾವರಣ ಮಾರು ಹೋಗಿದ್ದಾರೆ. ಐಟಿ. ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ಮಂದಿ ಕೃಷಿ ಚಟುವಟಿಕೆಗಳ ಕಡೆ ಗಮನ ಹರಿಸುತ್ತಿದ್ದಾರೆ. ಸಾಮಾಜಿಕ ಸ್ಥಿತಿಗಳು ಬಡತನ ಮುಕ್ತವಾಗಿ ಮಾಡಲು ಹಲವಾರು ಸರ್ಕಾರಿ ಯೋಜನೆಗಳು ದಾರಿದೀಪವಾಗಿ ಬರುತ್ತಿದೆ. ಬ್ಯಾಂಕುಗಳು, ಪತ್ರಿಕೆಗಳು ಮಾಹಿತಿಗಳ ಮೂಲಕ ಹೊಸ ರೀತಿಯ ಆಲೋಚನ ವ್ಯವಸ್ಥೆ ಬರುತ್ತಿದ್ದಾರೆ. ಗ್ರಾಮೀಣ ಸೊಬಗನ್ನು ಮೈಗೂಡಿಸಿಕೊಂಡ ವೆಂಕಣ್ಣ ಕನ್ನಡ ಬಳಕೆಯ ಪತ್ರಿಕೆಗಳು ತಂತ್ರಜ್ಞಾನವನ್ನು ಓದುವ ಹವ್ಯಾಸ ಜೊತೆಗೆ ಯಾಂತ್ರಿಕ ಬದುಕನ್ನು ಅವಲಂಬಿಸಿ ಹೊಸ ಸಾಧನೆಗಳನ್ನು ಮಾಡಲು ಹೋಗಿ ವೆಂಕಣ್ಣನನ್ನು ಎಡವಟ್ಟು ವೆಂಕಣ್ಣ ಎಂದು ಜನ ಕರೆಯಲಾರಂಬಿಸುತ್ತಾರೆ. ತಂತ್ರಜ್ಞಾನದ ಬಗ್ಗೆ ತನ್ನದೇ ಆದ ಕುತೂಹಲಗಳನ್ನಿಟ್ಟುಕೊಂಡ ವೆಂಕಣ್ಣ ಮೆಕಾನಿಕ್ ಕೆಲಸವನ್ನು ಸ್ವಂತ ತಿಳಿದುಕೊಂಡು ಮಾಡಲು ಬೆಂಗಳೂರಿಗೆ ಅದರ ಬಗೆಗಿನ ಪುಸ್ತಕವನ್ನು ಹುಡುಕಿಕೊಂಡು ಬರುತ್ತಾನೆ. ಅವನ ಸಹಾಯಕ್ಕೆ ಬಂದು ಹುಡುಗ ಮುಖಕ್ಕೆ ಹೊಡೆದಂತೆ ಹೇಳುತ್ತಾನೆ. 'ಅಂತಹ ಪುಸ್ತಕ ಕನ್ನಡದಾಗೆ ಸಿಗಲ್ಲ ಬಿಡ್ರಿ, ಬರೀ ಕಥೆ, ಕಾವ್ಯ, ನಾಟಕ, ಕಾದಂಬರಿ ಪುಸ್ತಕಗಳು ರಾಶಿ ರಾಶಿ ಇವೆ'. ಇಂಗ್ಲೀಷ್ ಕಲಿಯುವ ಆಸಕ್ತಿ ಇರುವುದಿಲ್ಲ. ಮಗನಿಗೆ ಕಂಪ್ಯೂಟರ್ ಕೊಡಿಸಲು ಕೇಳದ್ದಕ್ಕೆ ಐವತ್ತು ಸಾವಿರ ಖರ್ಚು ಆಗುತ್ತದೆ ಎಂದು ಸುಮ್ಮನಾದ. ವೆಂಕಣ್ಣ ಪುಸ್ತಕ ಅಂಗಡಿಯ ಹುಡುಗನ ಹತ್ತಿರ ಆಧುನಿಕತೆಯ ಪುಸ್ತಕಗಳ ಬಗ್ಗೆ ಕೇಳುತ್ತಾನೆ. ಆ ಪುಸ್ತಕಗಳು ಕನ್ನಡದಲ್ಲಿ ಮುದ್ರಣವಾಗಿಲ್ಲ ಎಂದು ತಿಳಿದಾಗ ನೋವುಂಟಾಗುತ್ತದೆ.

ವೆಂಕಣ್ಣ ಛಲ ಬಿಡದೇ ಜಗಟೆ ಯಂತ್ರವನ್ನು ತಂದನು. ಜೊತೆಗೆ ಗಂಟೆ ಒಡೆದಾಗ ಜನರಿಗೆ ಅಚ್ಚರಿಯಾಯಿತು. ಆದರೆ ಆಗಾಗ ಮಾತ್ರ ಕೆಟ್ಟು ಹೋಗುವಾಗ ಬೇಜಾರಾಗುತ್ತಿತ್ತು. ಆಗ ಜನ ಪೂಜೆ ಮಾಡಲು ಯಂತ್ರವನ್ನು ತೆಗೆದುಕೊಂಡು ಬಾರಪ್ಪ ಎಂದು ಗೋಗೆರೆಯುತ್ತಿದ್ದರು. ಆಗ ಆಧುನಿಕತೆ ರೋಬೋಟ್ ಆಗಿ

ಪರಿಣಮಿಸಿದೆ. ಆತನ ಮನಸ್ಸನ್ನು ಹೊಸ ರೀತಿಯ ಆಲೋಚನೆಗಳು ಜಾಗತೀಕ ಮಟ್ಟಕ್ಕೆ ಅನುಕೂಲಗಳ ಈಗ ಗಂಟೆ ಬಾರಿಸಲು ಜಗಟೆ ಬಡಿಯಲು ಯಂತ್ರಗಳು ಬಂದು ಬಿಟ್ಟಿವೆ.

'ಅಪಸ್ವರದಲ್ಲೊಂದು ಆರ್ತನಾದ' ಕಥೆಯ ಮೂಲಕ ಸ್ತ್ರೀಯರ ಸೌಂದರ್ಯದ ಬಗ್ಗೆಯೇ ಅವರಿಗೆ ನಂಬಿಕೆ. ಜೊತೆಗೆ ಬೇರೆಯವರಿಗೆ ಚೆನ್ನಾಗಿ ಕಾಣಲು ಎಂದು ಬಟ್ಟೆಗಳು, ಸೌಂದರ್ಯ ವರ್ಧಕಗಳನ್ನು ಬಳಸುತ್ತಾರೆ. ಆ ಮಂಜಿಯು ಆಫೀಸ್ ಕೆಲಸದ ಗೆಳತಿಯರು ತನ್ನ ಕಡೆ ನೋಡಲಿ ಎಂದು ಆಸೆ ಆಕೆಯನ್ನು ಹೊಗಳಿದರೆ ಸಾಕು ಮಂಜಿಗೆ ಕೋಪಬರುತ್ತಿತ್ತು. ಮಂಜಿಗೆ ಒಂದು ಕಡೆ ಕೆಟ್ಟ ಯೋಚನೆ ಕನಸಿನಲ್ಲಿ ಬರುತ್ತಿತ್ತು. ವಾಸ್ತವಕ್ಕೆ ಬೇರೆಯವರ ಮೇಲೆ ಕೋಪ, ಜಗಳ, ವೈಮನಸ್ಸುಗಳು ಇದ್ದಾಗ ಕೊಲೆ ಮಾಡಬೇಕು ಎನಿಸುತ್ತದೆ. ಆದ–ʼರೆ ಅದು ಅಪರೂಪವೆಂದು ತಿಳಿದು ತಪ್ಪುಗಳನ್ನು ಮಾಡಲು ಹೋಗುವುದಿಲ್ಲ. ಮಂಜಿಗೆ ಸಭೆ ಸಮಾರಂಭಗಳಿಗೆ ಹೋಗುವುದೆಂದರೆ ಹೆದರಿಕೆ. ಮದುವೆಗೆ ಹೋದಾಗ ಪಾಕ ಶಾಲೆಯಲ್ಲಿ, ವಾಸನೆ ಬರುವ ಶೌಚಾಲಯದಲ್ಲಿ ಕುಳಿತು ಬಿಕ್ಕಳಿಸಿ ಅಳುತ್ತಿರುತ್ತಾಳೆ.ಆಕೆಗೆ ಕೆಟ್ಟ ಕನಸುಗಳು ಬಿದ್ದು ಒಂದು ರೀತಿಯಲ್ಲಿ ಮದುವೆ ಆಗದ ಹುಡುಗಿ ಬೇರೆ, ತಾಯಿಗೆ ಇದೇ ಆಕೆಯ ದೊಡ್ಡ ಚಿಂತೆಯಾಗಿ–ತ್ತು. ಆಕೆ ಯಾರ ಜೊತೆ ಅಲೆದಾಡುತ್ತಾಳೆ ಚಕ್ಕಂದ ಆಡಿ ಬಂದು ಮನೆಯಲ್ಲಿ ಕೈಕಾಲು ತೊಳೆದುಕೊಂಡಳೆ ಎಂದು ತಾಯಿ ಮಂಜಿಗೆ ಬೈಯ್ಯುತ್ತಾಳೆ. ಸಮಾಜ ನೋಡವ ಕ್ರಮ ಒಂದು ರೀತಿಯ ಸೌಂದರ್ಯ ಆಕರ್ಷಣೆಗೆ ಮುಳುಗುತ್ತಾರೆ. ಸಿನಿಮಾದಲ್ಲಿ, ಪಾರ್ಕ್‌ನಲ್ಲಿ ಪ್ರಿಯತಮಯನ್ನು ತಬ್ಬಿಕೊಂಡಾಗ ಆಕೆಯ ಮನಸ್ಸಿನಲ್ಲಿ ಹೊಸ ಅಲೆಯೇ ಏಳುತ್ತದೆ. ಕೃಷ್ಣ ವೇಣಮ್ಮನಿಗೆ ಒಂದು ಕಡೆ ಮಗಳ ಚಿಂತೆ ಮತ್ತೊಂದು ಕಡೆ ಕಾಯಲೆ. ವಯಸ್ಸಿಗೆ ಬಂದ ಮಗಳು ಮದುವೆ ಆಗದೆ ಇದ್ದಾಗ ಸಮಾಜ ನೋಡುವ ಕ್ರಮ ಬೇರೆ. ಸಿನಿಮಾ ನೋಡುವ ಆಸೆ ಅವರಿಗೆ ಹೆಚ್ಚು. ಅದರಲ್ಲೂ ಮಾನಸ ಸರೋವರ ಬಂದರೆ ಸಾಕು ಎಲ್ಲಾ ಕೆಲಸಗಳನ್ನು ಬಿಟ್ಟು ಬಂದು ನೋಡುತ್ತಾರೆ. ಕಾರಣ ಆ ಸಿನಿಮಾದಲ್ಲಿ ಅವರ ಮನೆ, ಗಂಡ, ಮಕ್ಕಳು, ಮನೆಯ ಚಿತ್ರಣ ಸಿನಿಮಾ ಒಂದು ದೃಶ್ಯಗಳಲ್ಲಿ ಬರುತ್ತದೆ. ಮಗನು ಮನೆ ಬಿಟ್ಟು ಹೋಗಿರುವುದರಿಂದ ಅವನ ನೆನಪು ಸಿನಿಮಾ ನೋಡಿದಾಗ ಸದಾ ಬರುತ್ತದೆ. ಬೆಳಕು ಬಂದು ಕತ್ತಲು ಮಾಯವಾಗುತ್ತದೆ.ಆಗ ನಿತ್ಯ ಜೀವನದ ಹೊಸ ಹೊಸ ಯೋಚನೆಗಳು ಮಾಡಿ ಬದುಕನ್ನು ಕಾಣಬಹುದು. ಅಮ್ಮ ಮಗಳ ಜೀವನ ಒಂದು ರೀತಿಯಲ್ಲಿ ಆ ನಡು ರಾತ್ರಿಯ ಕಾಲ ಕಳೆದು ಪ್ರಸಂಗ ನೋಡಿದರೆ ಇನ್ನೇನು ವಾಹನಗಳಿಂದ ಬಂದ ಬೆಳಕು ಆರಿದಾಗ ಮೂಡಿದ ಕತ್ತಲು ಮೊದಲಿನ

ಕತ್ತಲಿಗಿಂತಲೂ ಭಯಂಕರವಾಗಿತ್ತು.

ಸಮಾಜದ ಬದಲಾವಣೆಯ ಮೇಲೆ ಬಹಳಷ್ಟು ರೀತಿಯ ಪ್ರಭಾವಗಳು ಬೀರುತ್ತಿವೆ. ಭೌಗೋಳಿಕ ಅಂಶಗಳು, ಜೈವಿಕ ಅಂಶಗಳು, ಸಾಂಸ್ಕೃತಿಕ ಅಂಶಗಳು, ತಾಂತ್ರಿಕ ಅಂಶಗಳು ಬಹಳಷ್ಟು ರೀತಿಯ ಸಾಮಾಜಿಕ ಸ್ಥಿತಿಗಳು ಮೇಲೆ ಪ್ರಭಾವ ಬೀರುತ್ತದೆ. ಇದರ ಮೂಲಕ ಸಂಸ್ಕೃತಿಯು ಮಾನವನು ಸಮಾಜದಲ್ಲಿ ಗಳಿಸುವ ಸಮಸ್ತ ಶ್ರೇಷ್ಠ ಅನುಭವಗಳ ಸಂಘಟಿತ ಫಲವೇ ಸಂಸ್ಕೃತಿಯು ಬಹಳಷ್ಟು ರೀತಿಯಲ್ಲಿ ಸಮಾಜದ ಮೇಲೆ ಪ್ರಭಾವ ಬೀರುತ್ತದೆ. ನಾವು ಆಚರಿಸುವ ಹಬ್ಬಗಳು, ಪೂಜಿಸುವ ದೇವಾನು ದೇವತೆಗಳು, ಕೈಗೊಳ್ಳುವ ಆಚರಣೆಗಳು ಇವುಗಳು ಸಂಸ್ಕೃತಿಯ ಪ್ರತೀಕವಾಗಿದೆ. ವಾಹನಗಳು ಹೆಚ್ಚಿದಂತೆ ಗಾಳಿಯು ಕಲುಷಿತಗೊಳ್ಳುತ್ತದೆ. ಪೆಟ್ರೋಲ್, ಡೀಸಲ್ ಮುಗಿದು ಹೋಗುವ ಸಂಪನ್ಮೂಲಗಳು. ಅದರಿಂದ ಮುಂದಿನ ದಿನಮಾನಗಳಲ್ಲಿ ಮುಗಿದು ಹೋದರೆ, ಮುಂದಿನ ನೆನೆಪು ಮಾಡಿಕೊಳ್ಳಲು ಬಲು ಕಷ್ಟ.

**ಪರಾಮರ್ಶನ ಗ್ರಂಥಗಳು:**

1. ಕೀರ್ತಿನಾಥ ಕುತುಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ (1983), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು.
2. ಕೋದಂಡರಾಮ ಎನ್. ಕೆ., ಕನ್ನಡ ಕಥಾ ಸಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ (1999), ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.
3. ಗಿರಡ್ಡಿ ಗೋವಿಂದರಾಜ್, ವೃಷ್ಟಿ ಸಮಷ್ಟಿ: ಕನ್ನಡ ನವ್ಯ ಕಥೆಗಳ ಅಧ್ಯಯನ (1983), ಅಜಂತ ಪ್ರಕಾಶನ, ಬೆಂಗಳೂರು.
4. ತಿರುಮಲೇಶ ಕೆ. ವಿ., ಅಸ್ತಿತ್ವವಾದ (1989), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ಶೇಷಗಿರಿರಾವ್ ಎಲ್. ಎಸ್., ಹೊಸಗನ್ನಡ ಸಾಹಿತ್ಯ (1968), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಹೊನ್ನಯ್ಯ ಸಿ. ಬಿ., ಕನ್ನಡ ಸಣ್ಣಕಥೆಗಳಲ್ಲಿ ದಲಿತ ಸಂಸ್ಕೃತಿ (2004), ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್. ಬೆಂಗಳೂರು.
7. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ (1993), ಕನ್ನಡ ಸಂಘ, ಕ್ರೈಸ್ಟ್ ಕಾಲೇಜು. ಬೆಂಗಳೂರು.
8. ವೀರಪ್ಪ ಜಿ.ಟಿ (ಸಂ), ಆಲೆಮದೆ (1995), ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ.
9. ವಿಜಯಲಕ್ಷ್ಮಿ ಕೆ. ಎಮ್., ಸಾಹಿತ್ಯ ಮತ್ತು ಸುತ್ತಣ ಸಮಾಜ (2010), ಕಿರಣ್‌ಬುಕ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳ್ರರು.
10. ಸಬಿಹಾ ಭೂಮಿ ಗೌಡ (ಸಂ), ಕನ್ನಡ ಸಾಹಿತ್ಯ ಮತ್ತು ಮಹಿಳೆ (2006), ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.